ಹಾಸನ ಡಿಸ್ಟ್ರಿಕ್ಟ್.

ನೋಟಿಸು, ತಾರೀಖು 5ನೆ ಅಕ್ಟೋಬರು 1907ನೆ ಇಸವಿ.

ಎರಡು ವರುಷಗಳಿಗಿಂತಲೂ ಅಧಿಕಕಾಲದಿಂದ ಪೇವಾರಸಾಗಿ ಇರುವ ಇದರಡಿ ಕಂಡ ದಸ್ತಾವೇಜನ್ನ ಹಾಜರು ಮಾಡಿದವರೇ ಆಗಲಿ ಅಥವಾ ಇವರಿಂದ ಅಧಿಕಾರ ಹೊಂದಿದ ಮುಕ್ತಾರೀಕರೆ ಆಗಲಿ ಈ ನೋಟಿಸು ತಾರೀಖು ಲಾಗಾಯಿತು ಬಂದು ತಿಂಗಳೊಳಗಾಗಿ ಮಂಜರಾಬಾದ್ ಸಬ್ ರಿಜಿಸ್ಟ್ರಾರ್ ರೂಬ್ ರೂಬ್ ಹಾಜರಾಗಿ ತೆಗೆದುಕೊಳ್ಳದೆ ಇದ್ದರೆ, ರಿಜಿಸ್ಟ್ರೇಷನ್ ರೆಗ್ಯುಲೇಷನ್ ನಂ. 1ರ 85ನೆ ಸೆಕ್ಷನ್ ಅನುಸರಿಸಿ ಈ ಕೆಳಗೆ ನಮೂದಾಗುವ ದಸ್ತಾವೇಜನ್ನ ನಾಶಪಡಿಸುತ್ತೆ :—

ಸೀರಿಯಲ್ ನಂಬರು.	ಸಬ್ ರಿಜಿಸ್ಟ್ರಾರರ ಆಫೀಸು ಹೆಸರು.	ಬುಕ್ಕಿನ ನಂಬರು.	ದಸ್ತಾವೇಜಿನ ನಂಬರು.	ದಸ್ತಾವೇಜು ಹುಟ್ಟಿದ ತಾರೀಖು.	ದಸ್ತಾವೇಜು ರಿಜಿಸ್ಟ್ರಿ ಆಗಿದ್ದನ್ನು ತಿರಸ್ಕರಿಸಿದ ತಾರೀಖು.	ದಸ್ತಾವೇಜು ಬರೆದುಕೊಟ್ಟವರ ಹೆಸರು.	ದಸ್ತಾವೇಜು ಬರೆದುಕೊಂಡವರ ಹೆಸರು.	ದಸ್ತಾವೇಜು ಸ್ವಭಾವ ಮತ್ತು ಗುಣ.
1	ಮಂಜರಾಬಾದು.	1.	465 1894-95	25—4—1895	27—6—95	ಮಂಜರಾಬಾದು ತಾಲ್ಲೂಕು ಬುಕ್ಕಾನಾರ ಸಂಜಿ ಹೋಬಳಿ ನಲ್ಲಿ ಗ್ರಾಮದಲ್ಲಿರುವ ಕೆಳ್ಳಿಮನೆ ದೊಡ್ಡಿಗಾಡ. ೧. ಡಿಟೋ ಭಟ್ಟಿಗಾಡ. ೨. ಡಿಟೋ ಮಂಜೇಗೌಡ.	ಬುಕ್ಕಾನಾರ ಸಂಜಿ ಹೋಬಳಿ ನಲ್ಲಿರುವ ಗ್ರಾಮದವನಾದ ಬೆಟ್ಟೇಗೌಡ.	1,000 ರೂಪಾಯಿನ ಇಷ್ಟಿಕೋಗ್ಯದ ಪತ್ರ.

ಎಂ. ಲಕ್ಷ್ಮಣಶಾಸ್ತ್ರಿ,
ಫಾರ್ ಡಿಸ್ಟ್ರಿಕ್ಟ್ ರಿಜಿಸ್ಟ್ರಾರ್.

ಕಡೂರು ಡಿಸ್ಟ್ರಿಕ್ಟ್.

ಇನ್ಸ್ಟಿಹಾರ್ನಾಮೆ.

ತಾರೀಖು 10ನೆ ನವೆಂಬರ್ 1907ನೆ ಇಸವಿ.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ, —ಕೊಪ್ಪ ತಾಲ್ಲೂಕು ಅಡಿಗೆಬೈಲ್ ಗ್ರಾಮದಲ್ಲಿ ಇನ ವಾಇದ ರಡಿ ನಮೂದ್ಮಾಡಿರುವ ಜಮೀನಿಗೆ ಕಾಫೀ ಸಾಗುವಳಿ ಬಗ್ಯಾಗಿ ದರಖಾಸ್ತು ಬಂದಿರೋಣದರಿಂದ ಸ್ಯ 1907ನೆ ಇಸವಿ ನವಂಬರ್ ತಾರೀಖು 30ನೆ ಶನಿವಾರ ಹಗಲು 11 ಘಂಟೆಗೆ ಕಡೂರು ಡೆಪ್ಯೂಟಿ ಕಮಿಷನರ್ ಸಾಹೇಬರವರ ಮುಂಜೂರಾತಿಗೆ ವಳಪಡಿಸಿ ಕೊಪ್ಪ ತಾಲ್ಲೂಕು ಅಮಲ್ದಾರ್ರು ರೂಬರೂ ಬಾಳಗಡಿ ವೊಕ್ಕಾಣಂನಲ್ಲಿ ಬಹಿರಂಗವಾದ ಹರಾಜು ಮೂಲಕ ಅವ್ವಗಳು ವಿಕ್ರಯಿಸಲ್ಪಡುವವೆ.

2. ಮಾಮೂಲ್ ಪರತ್ತುಗಳಿಗೆ ವಳಪಟ್ಟು ಬಹಿರಂಗವಾದ ಹರಾಜು ಮೂಲಕ ಸದರೀ ಲೀಲಾವ ನಡಿಸತಕ್ಕದ್ದು ಎಕರೆ 1ಕ್ಕೆ ಹತ್ತು ರೂಪಾಯಿಗಳ ಮೇರೆ ಆಗುವ ಅಪ್ಸೆಟ್ ಪ್ರೈಸು ಯಾನೆ ನಿಯಮವಾದ ಸರ್ಕಾರ್ ಸವಾಲಿಗೆ ಮೇಲ್ಪಟ್ಟು ಖಾಯಿಷ್ ಮಾಡುವ ಆಬ್ಜೆರ್ ಚಡ ದರಖಾಸ್ತುದಾರನಿಗೆ ಮೂರು ವಾರಗಳಿಂದ ಜವಿರ್ ಹರಾಜನ್ನ ಖೈದ್ ಮಾಡೋಣಾಗುತ್ತದೆ. ಹರಾಜಿನಲ್ಲಿ ಆ ಜಮೀರ್ ದರಖಾಸ್ತುದಾರನಿಗೆ ಆಗುವ ಪಕ್ಷದಲ್ಲಿ ಆತನಿಂದ ಹಾಜರಾಗಿರುವ ನಿಯಮವಾದ ಸರ್ಕಾರ್ ಸವಾಲ್ ಮೊಬಲಗು (ಅಪ್ಸೆಟ್ ಪ್ರೈಸಿನ ಪೈಕಿ ಯಾ ಚವಥಾಹಿಸ್ಸೆ ಡಿಪಾಜಿಟ್ ಮೊಬಲಗನ್ನು ಹರಾಜು ಮೊಬಲಗಿನ ಮೇಲೆ ನೇಕಡಾ 25 ರೂಪಾಯಿಗಳ ಮೇರೆ ಆಗುವ ಡಿಪಾಜಿಟ್ ಮೊಬಲಗು) ಭರ್ತಿಗೆ ಜರೂರ ಹಿಡಿಯೋಣಾಗುತ್ತೆ. ಆದರೆ ಆ ಜಮೀನನ್ನು ಹರಾಜಿನಲ್ಲಿ ದರಖಾಸ್ತುದಾರನಲ್ಲದ ಇತರರ್ಯಾರಾರೂ ಪಡದರೆ ದರಖಾಸ್ತುದಾರನ ಪುರೂ ತೇವಣಿ ಮೊಬಲಗನ್ನು ವಾಪಸ್ ಮಾಡೋಣಾಗುತ್ತದೆ.

3. ಮೇಲ್ಕಂಡ ಅಪ್ಸೆಟ್ ಪ್ರೈಸು ಯಾನೆ ನಿಯಮವಾದ ಸರಕಾರ್ ಸವಾಲ್ ಮೊಬಲಗಿನಲ್ಲಿ ಸರ್ವೆ ಖರ್ಚು ಮೊಬಲಗು ಮತ್ತು ಸರಕಾರ್ಕ್ಕೆ ನೆ ಯಾವಾಗಲೂ ಇಟ್ಟುಕೊಳ್ಳಲ್ಪಟ್ಟಿರುವ ಸಂದಲ್ ಪಿನಹ ಬಾಕಿ ಎಲ್ಲಾ ಜಾತಿ ಮಾರಗಳ ಮೇಲಿನ ಸರಕಾರಿ ಪತ್ತು ಹಕ್ಕುಗಳು ಅಡಗಿರುತ್ತವೆ.

4. ಹರಾಜು ಮೊಬಲಗು ಪೈಕಿ ನೇಕಡಾ 25 ರೂಪಾಯಿಗಳ ಮೇರೆ ಆಗುವ ತೇವಣಿ ಮೊಬಲಗನ್ನು, ಹರಾಜು ಖೈದಾದ ವಡನೆಯೇ 2ನೆ ಪ್ಯಾರಾದಲ್ಲಿ ನಮೂದಾಗುವ ಸಂದರ್ಭಾನುಸಾರ ಪುರೂ ಡಿಪಾಜಿಟ್ ಮೊಬಲಗಿನ ಭರ್ತಿಗೆ ವಳಪಟ್ಟು ಆಬ್ಜೆರ್ ಚಡ ದರಖಾಸ್ತುದಾರ ಕೊಡತಕ್ಕದ್ದು. ಪತ್ತು ಬಾಕಿಹಣವನ್ನು ಜಾರಿಯಲ್ಲಿ ಇರುವ ನಿಬಂಧನೆಗಳಲ್ಲಿ ಯುಕ್ತವಾಗಿರುವಂತೆ ಹರಾಜಾದ ತಾರೀಖುಲಿಗಾಯಿತು 15ನೇ ವಸ ಸಾರ್ವಜನಿಕ ಮಯಕ್ಕೆ ಮುಂಚೆಯೇ ಆಬ್ಜೆರ್ ಚಡ ದರಖಾಸ್ತುದಾರನು ಪಾವತಿ ಮಾಡ

ಕ್ಕದ್ದು. ಹಾಗೆ ಚಡ ದರಖಾಸ್ತುದಾರನು ಡಿಪಾಜಿಟ್ ಅಥವಾ ವಿಕ್ರಯದ ಬಾಕೀ ಪೊಬಲಗನ್ನು ಕೊಡದೆ ತಪ್ಪಿದರೆ ಅವನ ಖ
ನಿಂದಲೂ ಅವನಿಗೆ ನಷ್ಟಕರವಾಗಿಯೂ ಸದರೀ ಜಮೀನ್ ಪುನಃ ಹರಾಜು ಮಾಡಲ್ಪಡುವದು. ಎರಡನೇ ಹರಾಜಿನಲ್ಲಿ ಸಂಭವಿ
ವ ನಷ್ಟಕ್ಕೆ ಅವನು ಗುರಿಯಾಗಿರಬೇಕು ಆದರೆ ಜಾಸ್ತಿ ಏನಾದರೂ ಹುಟ್ಟಿದರೆ ಅದಕ್ಕೆ ಅವನಿಗೆ ಯಾವ ಹಕ್ಕೂ ಇರಲಾರದು.

5. ಈ ನಿಬಂಧನೆಗಳಿಗೆ ವಳಪಟ್ಟು ಹರಾಜಾದ ಜಮೀನನ್ನು ಮೂರು ಸಾಲ ಆಕಾರವಿಲ್ಲದೆ ಮುಫತ್ತು, 4ನೆ 5ನೆ
ಸಾಲ ಅರ್ಧ ಆಕಾರ, 6ನೆ ಸಾಲ್ ಲಾಗಾಯತು ಮತ್ತು ಅನಂತರ ಸಹ ಪೂರಾ ಆಕಾರ್ ಈ ಮೇರೆ ಕೊಟ್ಟುಕೊಂಡು ಅನುಭವಿಸತ
ಕ್ಕದ್ದು. ಈ ರಿಯಾಯಿತಿ ಕೊಡುವದಕ್ಕೆ ಮುಂಜೆ ಜಮೀನಿನಲ್ಲಿ ಇರುವ ಸಾಗುವಳಿ ಲಾಯಕಿನ ಪ್ರದೇಶವನ್ನು ಸಾಗುವಳಿಗೆ ತರ
ಲು ಪ್ರಾಮಾಣಿಕವಾದ ಪ್ರಯತ್ನ ಮಾಡದೆ ಅದರಲ್ಲಿ ಇರುವ ನಾಟಾವನ್ನು ಕತರಾಯಿಸಿಕೊಂಡೇ ಆಗಲಿ ಅದರಲ್ಲಿ ಯಾವ ಭಾಗವ
ನ್ನಾದರೂ ಫೈಲ್ ಮಾಡಿಯೇ ಆಗಲಿ ಸದರೀ ಜಮೀನಿಗೆ ರಿಯಾಯತಿ ಅವಧಿಯಲ್ಲಿ ರಾಜೀನಾಮೆ ಕೊಡುವ ಪಕ್ಷಕ್ಕೆ ಮೂರು ಸಾಲ
ಲಾಗಾಯತು ಪೂರಾ ಆಕಾರ ಕೊಡಲಿಚ್ಛೆಯನೆಂತ ಬರಹ ಮೂಲಕವಾಗಿ ಹರಾಜುದಾರನು ಮುಚ್ಚಳಿಕೆಯಿಂದ ಬದ್ಧನಾಗಬೇಕು.

ಸರ್ವೆ ನಂಬರ್	ದರಖಾಸ್ತುದಾರನ ಹೆಸರು.	ಜಮೀನ್ ಹೆಸರು ಮತ್ತು ಇರತಕ್ಕ ಸ್ಥಳ.	ಚತುರ್ಗಡ.	ದರಖಾಸ್ತು ಜಮೀನಿನ.	
				ವಿಸ್ತೀರ್ಣ.	ಆಕಾರ.
146	ವೆ॥ ಸಿ. ಎಸ್. ಕ್ಯಾಫರ್ಡ್ ಸಾಹೇಬರವರು.	ಅಡಿಗೆಪ್ಪಲು ಗ್ರಾಮ.	ಸರ್ವೆ ಪ್ರಕಾರ.	ಎ. ಗು. 60 19	...

ತಿಳುವಳಿಕೆ ಪರಾ :—ಬಂದು ಸರ್ವೆ ನಂಬರು ಪೈಕಿ ಕೆಲವು ಜಾಗಕ್ಕೆ ದರಖಾಸ್ತು ಬಂದು ಕಚ್ಚಾ ಅಳತೆ ಪ್ರಕಾರ ಅಂದಾಜು ಎಕರೆ ಮೇಲೆ ಅಪ್ವೆಟ್ ಪೈಸ ವಸೂಲಾದ್ದರಲ್ಲಿ ಕಾರುವಾಕಾ ಮೋಜಣೀ ಎಕರೆಗೆ ಗಣನೀಯವಾದಷ್ಟು ಕಮ್ಮಿ ಜಾಸ್ತೀ ಆದರೆ ಜಾಸ್ತೀ ಎಕರೆ ಸಂಬಂಧ ಅಪ್ವೆಟ್ ಪೈಸ ವಸೂಲೀ ಕೊಡುವುದಕ್ಕೇ ಆಗಲಿ ಕಮ್ಮಿ ಎಕರ ಸಂಬಂಧ ವಾಪಸು ಪಡೆಯುವದಕ್ಕೇ ಆ
ಗಲಿ ಜಮೀನ್ ಹಿಡುವಳಿದಾರನು ಬದ್ಧವಾಗಿರಬೇಕು.

ಬಿ. ಜೆ. ಕೊಮಾರಸ್ವಾಮಿ ನಾಯಕ್,
ಡಿಪ್ಯುಟಿ ಕಮಿಷನರ್.

ಅಮೃತಮಹಲ್ ಇಲಾಖೆ.

ಪ್ರಕಟನೆ.

(ಮೊಕ್ತಾಂ) ಹಾಸನ, ತಾರೀಖು 13–14ನೆ ನವೆಂಬರ್ 1907.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ :—ಅಮೃತಮಹಲ್ ಇಲಾಖೆ ಬಾಬತ್ತು ಹೆಣ್ಣು ಮತ್ತು ಗಂಡು ರಾಸುಗಳನ್ನ ಚಾಲ್ತೀ ಇಸವಿ ಡಿಸೆಂಬರ್ ಮಾಹೆ 2ನೆ ತಾರೀಖು ಲಾಗಾಯಿತು "ಹೊಳಲ್ಕೆರೆ" ಮೊಕ್ತಾಂನಲ್ಲಿ ಬಹಿರಂಗವಾಗಿ ಹರಾಜು ಮಾಡಲ್ಪಡುತ್ತೆ. ಇಷ್ಟವುಳ್ಳವರು ಸದರಿ ಹರಾಜಾಗುವ ಸ್ಥಳಕ್ಕೆ ಹಾಜರಾಗಿ ರಾಸುಗಳನ್ನ ಭಡ ಸವಾಲ್‌ನಿಂದ ಪಡೆಯ ಬಹುದು.

ಹೆಚ್. ನಂಜುಂಡರಾಜೇ ಅರಸ್,
ಸೂಪರ್‌ಟೆಂಡೆಂಟ್.

ಬೆಂಗಳೂರು ಸಬ್ ಜಡ್ಜಿಯವರ ಕೋರ್ಟ್‌ನಲ್ಲಿ.

ಸ್ಯ 1907—08ನೆ ಇಸವಿ ಮಿ॥ ಅರ್ಜೀ ನಂಬರ್ 366.

ಅರ್ಜಿದಾರರು ಬೀರೂರಿನಲ್ಲಿರುವ ಲೇಟ್ ವಿ. ಪಿ. ಸದಾಶಿವರಾವ್ ತಮ್ಮ ವೆಂಕೋಬರಾವ್ ಹೆಂಡತಿ ಸಂತೂಬಾಯಿ ಮೈನರಾದ
ಬೀರೂರು ಸ್ಥಳದ ಶ್ರೀಕಂಠರಾವ್ ಆಸ್ತೀ ವಿಷಯದಲ್ಲಿ—

ಸದರಿ ಮೈನರಾದ ಶ್ರೀಕಂಠರಾವ್‌ಗೆ ತಾಯಿ ಆಗಬೇಕೆಂಬ ಹಕ್ಕಿನ ಮೇಲೆ ಬೀರೂರು ಸ್ಥಳದ ಮೇಲ್ಕಂಡವರು ಸದರೀ ಮೈ
ನರಿನ ಆಸ್ತಿ ಕಾವಾಡುವದಕ್ಕೆ ಸರ್ಟಿಫಿಕೇಟ್ ಬ್ಯೈ ಅರ್ಜಿ ಕೊಟ್ಟು ಇರುತ್ತಾರೆ. ಸದರೀ ಅರ್ಜಿ ಹಿಯರಿಂಗ್ ಬ್ಯೈ ಸ್ಯ 1907ನೆ
ಇಸವಿ ಡಿಸೆಂಬರ್ ತಿಂಗಳ ತಾರೀಖು 6ರಲ್ಲು ಮೊಕರರು ಮಾಡಿ ಇರುವದಾಗಿ ಇದರಿಂದ ನೋಟಿಸ್ ಕೊಡೋಣಾಗಿದೆ.
1907ನೆ ಇಸವಿ ಆಕ್ಟೋಬರ್ ತಿಂಗಳ 25ನೆ ತಾರೀಖಿನಲ್ಲಿ ಕೋರ್ಟು ಮೊಹರ್ ನಮ್ಮ ದಸ್ತಖತ್ತಿನೊಡನೆ ಕೊಡೋ
ಣಾಗಿದೆ.